


ಧಾರವಾಡ ಆಕಾಶವಾಣಿಯಲ್ಲಿ ಧ್ವನಿಮುದ್ರಿತಗೊಂಡ ಚಂಪಾ ಅವರ ಪುಟ್ಟ ಸಂದರ್ಶನದ ಬರಹ ರೂಪವನ್ನು ಇಲ್ಲಿ ಕೊಡಲಾಗಿದೆ.

**ಒಂದ್** ದಿನಾ ಆಕಾಶವಾಣಿ ಧಾರವಾಡ ಕೇಂದ್ರದ ಮುಂದ್ ಹಾದು ಹೋಗುವಾಗ, ನನ್ನ ನೆನಪಾಗಿ ಚಂದ್ರಶೇಖರ ಪಾಟೀಲರು ಅವರು ಏಕಾಏಕೀ ಒಳಗ ಬಂದ್ ಬಿಟ್ಟಿದ್ರು. ಹೆಂಗೂ ಬಂದಾರಂತ ಸ್ಟುಡಿಯೊದೊಳಗ ಕರಕೊಂಡು ಹೋಗಿ, ಆಪಸಾತಿನೊಳಗ ಅವರ್ನ ಮಾತಾಡ್ಸಿದ್ದೆ. ಇದು ಆಗಿದ್ದು 1996ರಲ್ಲಿ. ಇದೇನೂ ಪ್ರಸಾರಕ್ಕಂತ ಮಾಡಿದ ಸಂದರ್ಶನಾ ಅಲ್ಲ, ಅದಕ್ಕಾಗೇ ಅದು ಪ್ರಸಾರ ಆಗ್ಲಿಲ್ಲ. ಈ ಸಮ್–ದರ್ಶನದೊಳಗ ಅವರ್ಗೆ ನಾನು ಕೇಳಿದ ಮದಲ್ನೇ ಪ್ರಶ್ನೆ, 'ನಿಮ್ಮ ಬರವಣಿಗೆಯ ಹಿಂದಿನ ಪ್ರೇರಣೆಗಳು ಏನು?' ಅಂತ. ಹಿಂತಾ ನನ್ನ ಪ್ರಶ್ನೇಕ್ಕೂ ತಯ್ಯಾರಿ ಇರಲಿಲ್ಲ, ಅವರ ಉತ್ತರಕ್ಕೂ ತಯ್ಯಾರಿ ಇರಲಿಲ್ಲ. ಒಟ್ಟs ಅದು ಪ್ಲ್ಯಾನ್ ಮಾಡ್ಕೊಂಡು ರೆಕಾರ್ಡ್ ಮಾಡಿದ ಕಾರ್ಯಕ್ರಮಾನೂ ಅಲ್ಲ. ಹಿಂಗಿದ್ರೂ ಚಂಪಾ ಅವ್ರು ತಮ್ಮ ಜವಾರಿ ಸ್ಟೈಲಿನೊಳಗ ಭಾಳ ಮಹತ್ವದ ವಿಷಯಗಳನ್ನ ತೋಂಡೀ ರೂಪದೊಳಗ ಹೇಳಿದ್ದು ನನಗ ಹಿಡಿಸಿತ್ತು. ಒಬ್ಬ ಸೃಜನಶೀಲ ಬರಹಗಾರನ ಬರವಣಿಗೆಯ ಹಿಂದ್ ಏನೇನು ಪ್ರೇರಣೆ ಇರ್ತಾವ ಅನ್ನೂದು ಅವರವರ ಆಸಕ್ತಿ, ಅಕ್ಕರಾಸ್ತಿ, ಅನುಭವ, ಪ್ರೇರಣೆ– ಇವೆಲ್ಲವುಗಳ ಮ್ಯಾಲ ನಿರ್ಧಾರ ಆಗುವಂಥಾದ್ದು ಅನ್ನೂದು ಖರೆ. ಹಂಗಾದ್ರ ಚಂಪಾ ಅವರ ಬರವಣಿಗೆಯ ಹಿಂದಿನ ಪ್ರೇರಣೆಗಳು ಏನು? ಯಾವ್ದs ಯಮಕು, ದಿಮಾಕು ಇಲ್ದs ಸಹಜವಾಗಿ ಅವರು ಉತ್ರಾ ಕೊಟ್ಟದ್ದು ಖರೇನs ಕೇಳೂವಂಗ್ ಐತಿ. ಅವರ ಮಾತಿನೊಳಗs ಕೇಳ್ರಿ. (ಅಲ್ಲ, ಈಗ ಓದ್ರಿ).

ಚಂಪಾ: ನನ್ನ ಬರವಣಿಗೆಯ ಹಿಂದಿನ ಪ್ರೇರಣೆಗಳು ಯಾವವು ಅಂತ ನೀವು ಕೇಳಿದ್ರಿ. ಇದನ್ನs ಸ್ವಲ್ಪ ಸಾದಾ ಸೀದಾ ಮಾಡಿ ವಿಚಾರಾ ಮಾಡಿ ನೀವ್ ಕೇಳಬೌದು, ನೀವು ಇಷ್ಟೆಲ್ಲಾ ಬರೀತೀರೆಲ್ಲಾ: ಕವನಾ, ನಾಟ್ಕಾ, ಅದೂ, ಇದೂ ಅಂತ; ಇದರ ಹಿಂದ್ ಏನು ಒತ್ತಡ ಐತಿ ನಿಮಗ? ಯಾಕ ಬರೀತೀರಿ? ಅಂತ. ಈ ಪ್ರಶ್ನೇ ಏನೈತೆಲ್ಲಾ, ಇದು ಭಾಳ ಕಾಲದಿಂದ ನಮ್ಮ ಮನಃಶಾಸ್ತ್ರಜ್ಞರನ್ನ ಮತ್ತ ಹಂಗs ಕವಿಗಳನ್ನ ಸೈತ ಕಾಡಿಸಿದೆಂತಾ ಪ್ರಶ್ನೆ. ಯಾಕಂದ್ರ, ನಾವು ವೈಜ್ಞಾನಿಕ ಯುಗದೊಳಗ ಬದಕ್ತಾ ಇರೂವಂಥಾ ಈ ಘಟ್ಟದೊಳಗ ಕಾರ್ಯ–ಕಾರಣ ಸಂಬಂಧ (**Cause and effect**) ಅಂತೇವೆಲ್ಲಾ, ಅಂತಂದ್ರ ಏನಾದ್ರೂ ಒಂದ್ ಘಟಿಸ್ತೀ ಅಂತಂದ್ರ, ಅದರ ಹಿಂದ್ ಏನಾದ್ರೂ ಒಂದ್ ಕಾರ್ಣ ಇರಬೇಕು ಅಂತ ಹುಡಕ್ತೇವಿ. ಅಂದ್ರ ಈ ಬರವಣಿಗೆ ಅಂತೇನೈತೆಲ್ಲಾ ಇದು ಒಂದ್ ಕ್ರಿಯಾ. **It is an act of creation.** ಇದು ತನ್ನಿಂದ ತಾನs **spontaneous** ಆಗಿ